ಕರ್ನಾಟಕ ವಿಧಾನ ಸಭೆ

ಮಂಗಳವಾರ ಹದಿನಾರನೆಯ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್.ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪ್ರವಾಸೋದ್ಯಮದ ಉಪಹಾರ ಮಂದಿರಗಳು

381 (388): ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):–

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹಾಗೂ ರಾಜ್ಯದ ಹೊರಗಡೆಯಿರುವ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಹೋಟೆಲುಗಳ ಒಟ್ಟು ಸಂಖ್ಯೆ ಎಷ್ಟು;

ಆ. ಈ ಹೋಟೆಲ್‌ಗಳು ಯಾವ ಸ್ಥಳಗಳಲ್ಲಿವೆ;

ಇ. ಅವುಗಳ ಪೈಕಿ, 1990–91 ರವರೆಗೆ ನಷ್ಟದಲ್ಲಿರುವ ಹೋಟೆಲುಗಳ ಸಂಖ್ಯೆ ಎಷ್ಟು;

ಈ. ನಷ್ಟದಡಿಯಲ್ಲಿ ನಡೆಯುತ್ತಿರುವ ಹೋಟೆಲ್‌ಗಳನ್ನು ಖಾಸಗಿ ವ್ಯಕ್ತಿಗಳಿಗೆ ವಹಿಸಿಕೊಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇರುವುದೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ರಾಜ್ಯದಲ್ಲಿ 14 ವಸತಿ ಗೃಹಗಳು. ರಾಜ್ಯದ ಹೊರಗೆ 2 ಹೋಟೆಲುಗಳು.

ಆ. 1) ಬಿಜಾಪುರ
2) ಗುಲ್ಬರ್ಗಾ
3) ಬೀದರ್
4) ಬೇಲೂರು
5) ಬಾದಾಮಿ
6) ಕೆ.ಆರ್.ಎಸ್
7) ಮಂಗಳೂರು
8) ಮಡಿಕೇರಿ
9) ಮೈಸೂರು
10) ನಂದಿ ಬೆಟ್ಟ
11) ಶ್ರೀರಂಗಪಟ್ಟಣ

12) ಟಿ.ಬಿ. ಡ್ಯಾಮ್
13) ಸೋಮನಾಥಪುರ
14) ಬೆಂಗಳೂರು
15) ತಿರುಮಲ
16) ಊಟಿ

ಇ. –5–

ಈ. ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ವಿ. ವೆಂಕಟಪ್ಪ:– ಸ್ವಾಮಿ, ತಮ್ಮ ಉತ್ತರದಲ್ಲಿ 5 ಹೋಟೆಲ್‌ಗಳಲ್ಲಿ ನಷ್ಟವಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ? ಈ ನಷ್ಟಕ್ಕೆ ಯಾರು ಕಾರಣಕರ್ತರಿದ್ದಾರೆ, ಅವರ ವಿರುದ್ಧ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ನಮ್ಮ ಕರ್ನಾಟಕ ಪ್ರವಾಸೋದ್ಯಮ ನಿಗಮದಲ್ಲಿ 5 ಹೋಟೆಲ್‌ಗಳಲ್ಲಿ ನಷ್ಟವಾಗಿದೆ ಎಂದು ಹೇಳಿದ್ದೇನೆ. ಏಕೆಂದರೆ ನಾವು ನಡೆಸುತ್ತಿರುವುದು ಬಹಳ ಸಣ್ಣಸಣ್ಣ ಹೋಟೆಲ್‌ಗಳು. ಅದರ ಆಡಳಿತವರ್ಗದ ಸಿಬ್ಬಂದಿ ಎಂದರೆ ಒಬ್ಬ ಎಂ.ಡಿ. ಉಪ ಕಾರ್ಯದರ್ಶಿಗಳು, ಅಕೌಂಟ್ಸ್ ಆಫೀಸರ್‌ಗಳು, ಇನ್ನೂ ಮುಂತಾದವರಿದ್ದಾರೆ. ಇದರ ಜೊತೆಗೆ ಹೆಚ್ಚು ಬಾಡಿಗೆಯನ್ನು ಕೊಟ್ಟು ಮ್ಯೂಸಿಯಂ ರಸ್ತೆಯಲ್ಲಿ ಒಂದು ದೊಡ್ಡ ಕಛೇರಿಯನ್ನು ಇಟ್ಟುಕೊಂಡಿದ್ದಾರೆ. ಈ ಆಡಳಿತವರ್ಗದ ಖರ್ಚು ಬಹಳ ಜಾಸ್ತಿಯಾಗಿದೆ. ನಮ್ಮಲ್ಲಿ ಒಟ್ಟು 16 ಹೋಟೆಲ್‌ಗಳು ಇದ್ದು ಒಂದೊಂದು ಹೋಟೆಲ್‌ಗೆ ಕನಿಷ್ಠ 1 ಲಕ್ಷ ರೂ. ಆದಾಯವೆಂದು ಇಟ್ಟುಕೊಂಡರೂ ಬರುವ ಆದಾಯಕ್ಕಿಂತ ಇಲ್ಲಿಯ ಆಡಳಿತವರ್ಗದ ಖರ್ಚೇ ಜಾಸ್ತಿ ಇರುವುದರಿಂದ ಇವು ನಷ್ಟದಲ್ಲಿ ನಡೆಯುತ್ತಿವೆ.

ಶ್ರೀ ಎಂ.ವಿ. ವೆಂಕಟಪ್ಪ:– ಖಾಸಗಿಯವರಿಗೆ ಇದನ್ನು ವಹಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅದು ಯಾವ ಹಂತದಲ್ಲಿದೆ ? ಯಾವಾಗ ವಹಿಸಿಕೊಡುತ್ತೀರಿ ? ಈ ಬಗ್ಗೆ ಯಾರಾದರೂ ಅರ್ಜಿ ಹಾಕಿದ್ದಾರೆಯೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಇದರ ಬಗ್ಗೆ ಕರ್ನಾಟಕ ಪ್ರವಾಸೋದ್ಯಮ ಸಂಸ್ಥೆಯವರು ಒಂದು ನಿರ್ಣಯವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇವು ಚಿಕ್ಕಚಿಕ್ಕ ಹೋಟೆಲ್‌ಗಳಾಗಿರುವುದರಿಂದ ಇವುಗಳನ್ನು ಎಕನಾಮಿಕಲ್ ಆಗಿ ನಡೆಸಲು ಸಾಧ್ಯವಾಗುತ್ತಿಲ್ಲ. ಅದರ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಣಯವನ್ನೂ ತೆಗೆದು ಕೊಂಡಿಲ್ಲ.

ಶ್ರೀ ಎನ್. ಚಿಕ್ಕೇಗೌಡ:– ಹೋಟಲ್ ಉದ್ಯಮ ತುಂಬಾ ಲಾಭದಾಯಕ ಉದ್ಯಮ. ಸರ್ಕಾರದ ವತಿಯಿಂದ ನಡೆಯುತ್ತಿರುವ ಈ ಹೋಟೆಲ್‌ಗಳು ನಷ್ಟದಲ್ಲಿರುವುದರಿಂದ ಇಲ್ಲಿನ ಸಿಬ್ಬಂದಿಯನ್ನು ತೆಗೆದು ಹಾಕಿ ಖಾಸಗಿಯವರಿಗೆ ಕೊಡಿ. ಈಗ ದೇಶದ ಎಲ್ಲಾ ಕಡೆಗಳಲ್ಲೂ ಪಂಚತಾರಾ ಹೋಟೆಲ್‌ಗಳನ್ನು ಖಾಸಗಿಯವರಿಗೆ ಕೊಡುತ್ತಿದ್ದಾರೆ. ನೀವೂ ಕೂಡ ಇದೇ ರೀತಿ ಟೆಂಡರ್ ಕರೆದು ಅವರಿಂದ ಹಣವನ್ನು ತೆಗೆದುಕೊಂಡು ಈ ನಷ್ಟದ ಉದ್ದಿಮೆಗಳನ್ನು ನಿಲ್ಲಿಸಿ. ಇಂಥ ಬಿಳಿ ಆನೆಗಳನ್ನು ಏತಕ್ಕೆ ಸಾಕುತ್ತಿದ್ದೀರಿ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಆದಷ್ಟು ಜಾಗ್ರತೆಯಾಗಿ ನಿರ್ಣಯವನ್ನು ತೆಗೆದುಕೊಂಡು ಗುತ್ತಿಗೆ ಆಧಾರದ ಮೇಲೆ ಕೆಲವು ನಷ್ಟವಾಗುತ್ತಿರುವ ಹೋಟೆಲ್‌ಗಳನ್ನು ಲೀಸ್‌ಗೆ ಕೊಡಬೇಕೆಂಬ ವಿಷಯ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಪಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಿಲಿನಲ್ಲಿ ಹೋಟೆಲ್ ಒಂದನ್ನು ಕಟ್ಟಿ 2–3 ವರ್ಷಗಳಾಯಿತು. ಸುಮಾರು 3–4 ಪ್ರಶ್ನೆಗಳನ್ನು ಇದರ ಬಗ್ಗೆ ಕೇಳಿದ್ದೇನೆ. ಈ ಸದನದಲ್ಲಿ ಮುಂದಿನ ಅಧಿವೇಶನ ಪ್ರಾರಂಭವಾಗುವಷ್ಟರಲ್ಲಿಯೇ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಏನು ಇದರ ಸಮಾಚಾರ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಿಲು ಹೋಟೆಲ್‌ಗೆ ಪೀಠೋಪಕರಣ ಮತ್ತು ಪೆಯಿಂಟಿಂಗ್, ವೈಟ್‌ವಾಷ್ ಇತ್ಯಾದಿ ಎಲ್ಲಾ ಕೆಲಸಕಾರ್ಯಗಳು ನಡೆಯುತ್ತಿವೆ. ಮುಂದಿನ ತಿಂಗಳು 2 ನೇ ಅಥವಾ 3 ನೆಯ ವಾರದಲ್ಲಿ ಮುಳಬಾಗಿಲು ಹೋಟೆಲ್ ಪ್ರಾರಂಭವಾಗುತ್ತದೆ.

ಮುಲ್ಕಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಫೇರ್‌ಸ್ಟೇಜ್

387 (701): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮುಲ್ಕಿಗೆ ಫೇರ್‌ಸ್ಟೇಜ್‌ನ್ನು ಗೊತ್ತು ಪಡಿಸದಿರುವುದಕ್ಕೆ ಕಾರಣವೇನು;

ಆ. ಫೇರ್ ಸ್ಟೇಜ್ ಗೊತ್ತು ಪಡಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಪುರಸಭೆಯವರು ಧರ್ಮಾರ್ಥವಾಗಿ ಜಾಗ ಕೊಡುವುದಾಗಿ ಹೇಳಿದರೂ ಕಾರ್ಯಪ್ರವೃತ್ತರಾಗದಿರಲು ಕಾರಣವೇನು;

ಈ. ಇದರ ಬಗ್ಗೆ ಸರ್ಕಾರ ಎಷ್ಟು ಸಮಯದಲ್ಲಿ ಕ್ರಮ ತೆಗೆದುಕೊಳ್ಳುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೂಲ್ಕಿಗೆ ಫೇರ್‌ಸ್ಟೇಜನ್ನು ಗೋತ್ತುಪಡಿಸಿದೆ.

ಆ. ಉದ್ಭವಿಸುವುದಿಲ್ಲ.

ಇ. ಬಸ್ ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆಯು ಇಲ್ಲದಿರುವುದರಿಂದ ಜಮೀನಿನ ಅಗತ್ಯವಿರುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಉತ್ತರದಲ್ಲಿ ಮುಲ್ಕಿಯಲ್ಲಿ ಫೇರ್‌ಸ್ಟೇಜ್‌ಅನ್ನು ಗೊತ್ತುಪಡಿಸಲಾಗಿದೆ ಎಂದು ಹೇಳಿದ್ದೀರಿ, ಆದರೆ ಹೋಗುವಂತ ಬಸ್‌ಗಳು ಅಲ್ಲಿ ನಿಲ್ಲುವುದಿಲ್ಲ. ನಾವು ತಡೆದರೂ ಸಹ ಆ ಬಸ್‌ಗಳು ನೇರವಾಗಿ ತೆಗೆದುಕೊಂಡು ಹೋಗುತ್ತಾರೆ.